■ ಶಶಿಕುಮಾರ್ ಸಿ.

# ಲೋನ್ ಆ್ಯಪ್; ಗೂಗಲ್ ಕೊಕ್ಕೆ

ಆನ್‌ಲೈನ್‌ನಲ್ಲಿ ಲಭ್ಯವಿರುವ ಅನಧಿಕೃತ ಲೋನ್ ಆ್ಯಪ್‌ಗಳ ವಿರುದ್ಧ ಮಹತ್ವದ ನಿರ್ಧಾರ ಕೈಗೊಂಡಿರುವ ಗೂಗಲ್ ತನ್ನ ಪ್ಲೇಸ್ಟೋರ್ ವೇದಿಕೆಯಲ್ಲಿದ್ದ 2500ಕ್ಕೂ ಅಧಿಕ ಲೋನ್ ಆ್ಯಪ್‌ಗಳನ್ನು ನಿಷ್ಕ್ರಿಯಗೊಳಿಸಿದೆ.

ಮೋಸ, ವಂಚನೆ, ಅಧಿಕ ಬಡ್ಡಿ, ದೌರ್ಜನ್ಯ ಇನ್ನಿತರ ವಿಚಾರಗಳಿಂದಲೇ ಸುದ್ದಿಯಾಗುತ್ತಿದ್ದ ನಕಲಿ ಆನ್‌ಲೈನ್ ಲೋನ್ ಆ್ಯಪ್‌ಗಳು ಗೂಗಲ್ ಪ್ಲೇಸ್ಟೋರ್‌ನಲ್ಲಿ ಸಕ್ರಿಯವಾಗಿದ್ದವು. ಇವುಗಳ ಬಗ್ಗೆ ಜಾಹೀರಾತು ಸೇರಿದಂತೆ ನಾನಾ ರೀತಿಯ ಪ್ರಚಾರ ಕಾರ್ಯವು ಎಗ್ಗಿಲ್ಲದೆ ನಡೆಯುತ್ತಿತ್ತು. ವಂಚನೆಯ ದೃಷ್ಟಿಯಿಂದಲೇ ಸೃಷ್ಟಿಯಾದ ಈ ಆ್ಯಪ್‌ಗಳು ಕಾನೂನುಬಾಹಿರವಾಗಿದ್ದು, ಇದಕ್ಕೆ ಪೂರಕವಾಗಿ ಗೂಗಲ್ ಸಹ ದಿಟ್ಟ ನಿರ್ಧಾರ ಕೈಗೊಂಡಿದೆ.

ಲೋನ್ ಆ್ಯಪ್‌ಗಳಿಂದ ಸಾಲ ಪಡೆಯಲು ಪೇಪರ್ ವರ್ಕ್, ಜನರ ಸಹಿ, ಯಾವುದೇ ವಸ್ತುವಿನ ಅಡಮಾನ ಇಡುವ, ಲೋನ್ ಪಡೆಯುವ ವ್ಯಕ್ತಿಯ ನೇರ ಹಾಜರಿ ಅಥವಾ ಆ ವ್ಯಕ್ತಿ ವಾಸಿಸುತ್ತಿರುವ ಜಾಗದ ವೆರಿಫಿಕೇಷನ್ ಮಾಡುವ ಗೋಜಂತೂ ಇರುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಸುಲಭವಾಗಿ ಸಾಲದ ಸಿಗುತ್ತದೆ. ಈ ಕಾರಣಕ್ಕೆ ಜನರು ಈ ಆ್ಯಪ್‌ಗಳತ್ತ ಮುಗಿಬಿದ್ದು ವಂಚನೆಗೊಳ್ಳುತ್ತಿದ್ದರು. ಇಂತಹ ಸೇವೆ ಕಲ್ಪಿಸುವ ಸಾವಿರಾರು ಆ್ಯಪ್‌ಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದವು. ಅಂತಹ ಆ್ಯಪ್‌ಗಳನ್ನು ತನ್ನ ವೇದಿಕೆಯಿಂದ ಗೂಗಲ್ ತೆಗೆದುಹಾಕಿದೆ.




ಕೆಲ ವರದಿಗಳ ಪ್ರಕಾರ ಸುಮಾರು 4000ಕ್ಕೂ ಅಧಿಕ ಸಾಲದ ಅಪ್ಲಿಕೇಷನ್‌ಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲಿದ್ದು, ಅವುಗಳ ಪೈಕಿ ಹಲವು ವಂಚನೆ, ನಕಲು, ಇತರೆ ಸಮಸ್ಯೆಗಳನ್ನು ಆ್ಯಪ್ ಬಳಕೆದಾರರಿಗೆ ತಂದೊಡ್ಡುವ ಹಿನ್ನೆಲೆಯಲ್ಲಿ ಗೂಗಲ್ 2500 ಅಪ್ಲಿಕೇಷನ್‌ಗಳನ್ನು ತೆಗೆದುಹಾಕಿದೆ.

### ನಕಲಿ ಆ್ಯಪ್‌ಗಳ ಬಗ್ಗೆ ಇರಲಿ ಎಚ್ಚರ

- ಒಂದೇ ಹೆಸರಿನ ಹಲವು ಆ್ಯಪ್‌ಗಳ ಬಗ್ಗೆ ನಿಗಾ ಇಡಿ. ಅವುಗಳ ರೇಟಿಂಗ್, ಕಮೆಂಟ್, ರಿವ್ಯೂಗಳ ಮೇಲೆ ನಿಗಾವಹಿಸಿ.
- ಸಾಲ ಕೊಡುವ ಸಂಸ್ಥೆ / ಆ್ಯಪ್ ಆರ್‌ಬಿಐನಲ್ಲಿ ನೋಂದಣಿಯಾಗಿದೆಯೇ ಎಂದು ಪರಿಶೀಲಿಸಿ.
- ಆ್ಯಪ್ ಇನ್‌ಸ್ಟಾಲ್ ಮಾಡುವಾಗ ಮೊಬೈಲ್‌ನ ಗ್ಯಾಲರಿ, ಕಾಂಟ್ಯಾಕ್ಟ್ಸ್, ಸಾಮಾಜಿಕ ಜಾಲತಾಣಗಳು, ಪೇಮೆಂಟ್ಸ್ ಅಪ್ಲಿಕೇಷನ್‌ಗಳ ಸಂಪರ್ಕಕ್ಕೆ ಅನುಮತಿ (Access) ಕೊಡಬೇಡಿ.
- ಅಪ್ಲಿಕೇಷನ್ ಇನ್‌ಸ್ಟಾಲ್ ಬಳಿಕ ಪದೇ ಪದೇ ಬರುವ ಒಟಿಪಿಗಳು, ಆಫರ್‌ಗಳ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ.
- ಸಾಲ ನೀಡುವ ಆ್ಯಪ್ ಹೆಸರಿನ ವೆಬ್‌ಸೈಟ್ ಚೆಕ್ ಮಾಡಿ. ಆ ವೆಬ್‌ಸೈಟ್ ಸೆಕ್ಯೂರ್ ಆಗಿದೆಯೇ ಎಂದು ಪರಿಶೀಲಿಸಿ.
- ಆರ್‌ಬಿಐ ನಿಯಮದ ಪ್ರಕಾರ ಪ್ರತಿ ಲೋನ್‌ಗೆ ಮಂಜೂರು ಪತ್ರ (Sanction Letter) ನೀಡಬೇಕು. ಇದರಲ್ಲಿ ಸಾಲದ ಸಂಪೂರ್ಣ ಮಾಹಿತಿ ಇರುತ್ತದೆ. ಇದನ್ನು ನೀಡದಿದ್ದರೆ ಅಂಥವು ನಕಲಿ ಎಂದರ್ಥ ಹಾಗೂ ವಂಚನೆ ಮಾಡುವ ಆ್ಯಪ್‌ಗಳು ಎಂದೇ ಪರಿಗಣಿಸಿ.
- ಸಾಲ ನೀಡುವಾಗ ನಿಮ್ಮ ಕ್ರೆಡಿಟ್ / ಬ್ಯಾಂಕ್ ಹಣಕಾಸು ವ್ಯವಹಾರದ ಇತಿಹಾಸ ಪರಿಶೀಲನೆ ಮಾಡದಿದ್ದರೆ, ಅದು ನಿಮ್ಮನ್ನು ವಂಚನೆಗೆ ಒಳಪಡಿಸುವ ಜಾಲವೆಂದೇ ಅರ್ಥ.
- ಸದಸ್ಯತ್ವ ಪಡೆಯುವ ಆ್ಯಪ್ ಹಾಗೂ ಸಾಲ ನೀಡುವ ಆ್ಯಪ್‌ಗಳು ಒಂದೇ ಆಗಿರುವುದಿಲ್ಲ. ಈ ಬಗ್ಗೆ ಜಾಗ್ರತೆ ಇರಲಿ.
- 60 ದಿನಗಳೊಳಗೆ ಲೋನ್ ಮರುಪಾವತಿಗೆ ಅವಕಾಶ ನೀಡುವ ಯಾವುದೇ ಆ್ಯಪ್‌ಗಳಿಗೆ ಗೂಗಲ್ ಅನುಮತಿ ನೀಡದು.
- ಶುಲ್ಕದ ವಿವರ ನೀಡದ ಹಾಗೂ ಆ್ಯಪ್ ನಿರ್ವಹಣೆಯ ವಿಳಾಸ ನೀಡದಿರುವುದು ವಂಚನೆಯ ಭಾಗವೇ. ■

---

# ವೇಗದ 5ಜಿ ಸೇವೆ: ದೇಶಕ್ಕೆ 10ನೇ ಸ್ಥಾನ

ಅತ್ಯಂತ ವೇಗದ 5ಜಿ ನೆಟ್‌ವರ್ಕ್ ಕಲ್ಪಿಸುತ್ತಿರುವ ವಿಶ್ವದ ಟಾಪ್ 10 ದೇಶಗಳ ಪಟ್ಟಿಯಲ್ಲಿ ಭಾರತವು ಹತ್ತನೇ ಸ್ಥಾನ ಪಡೆದುಕೊಂಡಿದೆ. ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಜಗತ್ತಿನಲ್ಲೇ ಅತ್ಯಂತ ವೇಗದ 5ಜಿ ನೆಟ್‌ವರ್ಕ್ ಸೇವೆ ಕಲ್ಪಿಸುತ್ತಿರುವ ಮೊದಲ ದೇಶ ಎಂಬ ಕೀರ್ತಿಗೆ ಪಾತ್ರವಾಗಿದೆ.

ಸ್ಪೀಡ್‌ಟೆಸ್ಟ್.ನೆಟ್ ಸೈಟ್‌ನ ಊಕ್ಲಾ (Ookla) ಸಂಸ್ಥೆಯು ಈ ಕುರಿತು ವರದಿ ಮಾಡಿದ್ದು, ಜಪಾನ್, ಬ್ರಿಟನ್‌ನಂತಹ ದೇಶಗಳನ್ನು ಹಿಂದಿಕ್ಕಿದೆ. 5ಜಿ ತಂತ್ರಜ್ಞಾನ ಸೇವೆ ಜಾರಿಗೊಂಡ ವರ್ಷದಲ್ಲೇ ಭಾರತವು ಜಾಗತಿಕವಾಗಿ ಟಾಪ್ 10 ಪಟ್ಟಿಯಲ್ಲಿ ಗುರುತಿಸಿಕೊಂಡಿರುವುದು ಉತ್ತಮ ಬೆಳವಣಿಗೆ. ದೇಶದ ಮೂಲೆಮೂಲೆಗೂ ಈ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಇನ್ನಷ್ಟು ವೇಗವಾಗಿ ಕಾರ್ಯೋನ್ಮುಖವಾಗಲು ಇದು ಪ್ರೇರಣೆಯಾಗಿದೆ ಎನ್ನಲಾಗಿದೆ.

ಜೊತೆಗೆ ಸ್ಪೀಡ್‌ಟೆಸ್ಟ್ ಗ್ಲೋಬಲ್ ಇಂಡೆಕ್ಸ್‌ನಲ್ಲಿ 2022ರ ಸೆಪ್ಟೆಂಬರ್‌ನಿಂದ 2023ರ ಆಗಸ್ಟ್ ಮಧ್ಯೆ ಭಾರತವು 72 ಸ್ಥಾನ ಏರಿಕೆ ಕಂಡಿದ್ದು, ಇದೂ ಗಮನಾರ್ಹ ಸಾಧನೆಯಾಗಿದೆ. ಭಾರತದ 5ಜಿ ವೇಗವು 312.09 ಎಂಬಿಪಿಎಸ್ (ಸೆಕೆಂಡ್‌ಗೆ 312 ಎಂಬಿ ಡೌನ್‌ಲೋಡ್ ಮಾಡುವ ಸಾಮರ್ಥ್ಯ) ಇದೆ. ಇದೇ ಸಂಸ್ಥೆ ಬಿಡುಗಡೆ ಮಾಡಿದ 2022ರ ಮೂರನೇ ತ್ರೈಮಾಸಿಕ ವರದಿಯಲ್ಲಿ ವೇಗದ 5ಜಿ ನೆಟ್‌ವರ್ಕ್ ಕಲ್ಪಿಸುತ್ತಿರುವ ದೇಶಗಳ ಪಟ್ಟಿಯಲ್ಲಿ ಬ್ರೆಜಿಲ್ ಹತ್ತನೇ ಸ್ಥಾನ ಪಡೆದಿತ್ತು. ಸದ್ಯ ಆ ದೇಶವೀಗ 443.93 ಎಂಬಿಪಿಎಸ್ ವೇಗದ 5ಜಿ ನೆಟ್‌ವರ್ಕ್ ಕಲ್ಪಿಸಿ, 5ನೇ ಸ್ಥಾನಕ್ಕೇರಿದೆ.

2023ರ ಮೂರನೇ ತ್ರೈಮಾಸಿಕ ವರದಿಯಲ್ಲಿ ಯುಎಇ 5ಜಿ ವೇಗವು ಹಿಂದೆಗಿಂತಲೂ ಶೇ.14ರಷ್ಟು ಹೆಚ್ಚಾಗಿದೆ. ದಕ್ಷಿಣ ಕೊರಿಯಾ ಹಾಗೂ ಮಲೇಷಿಯಾದ 5ಜಿ ವೇಗದಲ್ಲೂ ಗಮನಾರ್ಹ ಏರಿಕೆ ಕಂಡಿದೆ. ಇನ್ನು ನಾಲ್ಕನೇ ಸ್ಥಾನದಲ್ಲಿ ಕತಾರ್ ಇದ್ದರೆ, ಬ್ರೆಜಿಲ್ ಐದನೇ ಸ್ಥಾನದಲ್ಲಿದೆ. ಟಾಪ್ 10ರಲ್ಲಿ ಅಮೆರಿಕ, ಜಪಾನ್, ಚೀನಾ, ಬ್ರಿಟನ್ ಸ್ಥಾನ ಗಳಿಸದಿರುವುದು ಮಹತ್ವದ ಸಂಗತಿಯಾಗಿದೆ. ■



### ಟಾಪ್ 10 ರಾಷ್ಟ್ರಗಳು

- ಯುಎಇ
- ದ. ಕೊರಿಯಾ
- ಮಲೇಷಿಯಾ
- ಕತಾರ್
- ಬ್ರೆಜಿಲ್
- ಡಾಮಿನಿಕನ್ ರಿಪಬ್ಲಿಕ್
- ಕುವೈತ್
- ಮಕಾವು
- ಸಿಂಗಪುರ
- ಭಾರತ